ಮಲತಾಯಿ ಬಿರುದಿಗೆ ಪಾತ್ರವಾಗಬಾರದೆಂದು ಮೊದಲ ಹೆಂಡತಿಯ ಮಗಳಿಗೆ ತುಸು ಹೆಚ್ಚೇ ಕಾಳಜಿವಹಿಸುತ್ತಿದ್ದಳು.

ಅಕ್ಕು ಏಣಿಯಿಳಿದು ಬಂದು ಪಲಕದ ಚೀಲ ಇಟ್ಟಳು; ಡಬ್ಬಿಯೊಳಗೆ ಕೈಯಾಡಿಸಿ ಕೆಂಪು ಸಿಗರು ಬೆಟ್ಟೆ ಅಡಿಕೆಗಳನ್ನು ಮೂರು ಬೊಗಸೆ ತಂದು ಚೀಲದೊಳಗೆ ಸುರಿವಿದಳು; ಗಂಡ ಅಸಹನೆಯಿಂದ ಕಿರುಚಾಡಬಹುದು ಎಂದು ಕಾಳಗಕ್ಕೆ ಸನ್ನದ್ಧಳಾಗಿ ನಿಂತಿದ್ದಳು; ಅವನು ಕೆರಳಲಿಲ್ಲ; ಅವನ ತಣ್ಣನೆಯ ನಿರಾಳ ನಿರ್ಲಕ್ಷ್ಯಕ್ಕೆ ಅವಳೇ ತಲ್ಲಣಿಸಿ ಹೋದಳು.

"ಅನಂತ ನಮ್ಮ ಕೆಲ್ಸಕ್ಕೆ ಹೋಗ್ತಾ, ಬಸ್ ಖರ್ಚಿಗೆ ಕೊಡಿ" ರೇಗಿದಳು. ಪಾಚಣ್ಣ ಕೇಳಿಯೂ ತಳೆ ಕಟ್ಟುವುದರಲ್ಲಿ ತಲ್ಲೀನನಾಗಿರುವಂತೆ ನಟಿಸಿದ. ಮುಜುಗರವಾಗಬಾರದೆಂದು ಅನಂತ, "ತಿರ್ಗಿ ಬಂದ್ಮೇಲೆ ತಗಳ್ತೆ" ಎಂದು ಚೀಲ ಹಿಡಿದು ದೇಶಾಂತರ ಹೊರಟ. ಜೀವ ಹಿಡಿದುಕೊಂಡಿದ್ದ ಬೆಂಕಿ ಗದ್ದೆ ವಾರೆಯಲ್ಲಿ ಮತ್ತೆ ಉರಿಯತೊಡಗಿತು. ಪಾಗಾರ ದಾಟುವಾಗ ಅನಂತ ಹಿಂದಿರುಗಿ ನೋಡಿದ: ಗಾಳಿ–ಬೆಂಕಿಯ ಕಾಮಕೇಳಿಯ ಹಿನ್ನಲೆಯಲ್ಲಿ ದಂಪತಿ ನಿಂತಿದ್ದರು.

ತಾರಿಬಾಗಿಲ ಸಲೀಲತ್ತೆಯ ಮನೆಯ ಇಕ್ಕಟ್ಟಾದ ಪಾಗಾರಿನ ಓಣಿ ಗುಂಟ ನಡೆಯುತ್ತಿದ್ದ ಅನಂತ ಓಡಿದರೂ ಮಳೆಯಿಂದ ತಪ್ಪಿಸಿಕೊಳ್ಳಲಾಗಲಿಲ್ಲ; ತುಸು ನೆನೆದಿದ್ದ ಅವನು ಸಲೀಲತ್ತೆಯ ಮನೆಯ ಚಿಟ್ಟೆಯ ಮೇಲೆ ನಿಂತ. ಹೊರ ಬಾಗಿಲು ಮುಚ್ಚಿತ್ತು; ತಳಿಯಿಂದ ಜಗಲಿ ನೋಡಿದ. ಅಕಾಲ ಮಳೆಗೆ ಬೆಚ್ಚಿದಂದತಿದ್ದ ಸ್ತಬ್ಧ ಹಗಲು; ಯಾರ ಸುಳಿವಿಲ್ಲ; ಮಧ್ಯಾಹ್ನದ ಊಟದ ಹೊತ್ತು; ಅಕ್ಕಪಕ್ಕದ ಕಂಪೌಂಡುಗಳ ಹಿತ್ತಲ ಬಾಳೆ ಹೆಡೆಗಳ ಮೇಲೆ ದೊಡ್ಡ ಹನಿಗಳು ಪಟಪಟನೆ ಬೀಳುವ ಸದ್ದು ಹೆಚ್ಚಾಯಿತು; ಇಣುಕಿ ಆಲಿಸಿದ. ಹೊಸ್ತಿಲೊಳದಲ್ಲಿ ಸಲೀಲತ್ತೆ ಮತ್ತು ದತ್ತುವಿನ ತಾರಕಕ್ಕೇರಿದ ಜಗಳದ ಮಾತು ಕೇಳಿದಂತಾಯಿತು. ಅನಂತನ ಕಂಡರೂ ಇಬ್ಬರ ಅಬ್ಬರದ ಮಾತು ತಗ್ಗಲಿಲ್ಲ; ಅನಂತ ಅಳುಕುತ್ತ ಆತಂಕದಲ್ಲಿ ಒಳಗೆ ನಡೆದ; "ಬಾ ಅನಂತಣ್ಣ, ನಿನಗೂ ಈ ಮನೆ ಹೊಲಸು ಗೊತ್ತಾಗ್ಲಿ" ದತ್ತು ಕಹಳೆ ಊದಿದ. ಸಲೀಲತ್ತೆ ಕಂಬದ ಮರೆಯಲ್ಲಿ ನಿಂತು ಕಲಹ ಬಹಿರಂಗವಾಗದಂತೆ ತಡೆಯಲು ಸನ್ನೆ ಮಾಡಿ ಸುಮ್ಮನಿರಲು ಮಗನನ್ನು ಯಾಚಿಸುತ್ತಿದ್ದಳು; ಯಾರಾದರೂ ಕೇಳಿಸಿಕೊಂಡರೇ ಎಂದು ಬಗ್ಗಿ ಬಗ್ಗಿ ಕೇರಿಯ ದಾರಿಯತ್ತ ನೋಡಿದಳು. ಅವಳ ಮೊಕ ಹುಳ್ಳಹುಳ್ಳಗಾಗಿತ್ತು; "ಊಟ ಮಾಡ್ತಾ ಇದ್ದ್ಯದ್ಯೊ" ಚೇತರಸಿಕೊಳ್ಳಲು ಹೆಣಗಿದಳು. "ಸುಳ್ಳು ಬೊಗಳಡಾ. ಇದು ಉಣ್ಣೋ ಲಕ್ಷಣವಾ ನೀನೇ ಒಳಗೆ ಬಂದು ನೋಡು" ಎನ್ನುತ್ತ ಅನಂತನ ರಟ್ಟೆ ಹಿಡಿದು ಜಗ್ಗಿ ಅಡಿಗೆ ಮನೆಗೆ ಎಳೆದು ತಂದ. ಮಣ್ಣು ನೆಲದಲ್ಲಿ ಕಲಸಿದ ಸಾರಿನನ್ನದ ಅಗಳುಗಳು ಹರಡಿ ಬಿದ್ದಿದ್ದವು; ಚೆಲ್ಲಿದ ಮಜ್ಜಿಗೆ ಮಣೆಯ ಅಡಿಯಿಂದ ಸಣ್ಣ ನದಿಯಾಗಿ ಹರಿದು ಮುಂದೊರೆಯಲು ತಿಳಿಯದೆ ನಿಂತಿತ್ತು; ಸ್ಟೀಲಿನ ತಾಟುಗಳು ಕೌಚಿ ಬಿದ್ದಿದ್ದವು; ಬೆಕ್ಕೊಂದು ಹೆದರಿ ಒಲೆಯ ಸನಿಹ ಮುದುಡಿ ಕೂತು ನಡುಗುತ್ತಿತ್ತು; ದೇವರ ಪೀಠದಲ್ಲಿದ್ದ ವಿಗ್ರಹವೊಂದು ಯುದ್ಧಭೂಮಿಯ ಹತ ಯೋಧನಂತೆ ಉರುಳಿತ್ತು; ಅನಂತನ ಮುಂದೆ ರಣರಂಗದ ಅವಶೇಷವಿತ್ತು. "ಅನಂತನ ಮುಂದೆ ನಿನ್ನ ಅವತಾರ ಪೌರುಷ ತೋರ್ಸಡ್ಯೊ" ಸಲೀಲತ್ತೆ ಸನ್ನಿವೇಶವನ್ನು ಹತೋಟಿಗೆ ತರಲು ಯತ್ನಿಸಿದಳು; ಇಷ್ಟರವರೆಗೆ ಸನ್ನೆ, ಪಿಸುದನಿಯಿಂದ ಕಾಪಾಡಿದ ಸಂಸಾರದ ಗುಟ್ಟು ಒಡೆದು ಹೋಯಿತು; "ಏನೆಂದೆ ಬೋಳಿ, ಇನ್ನೊಂದು ಸಲ ಹೇಳು ನೋಡ್ವಾ ನಾ ಪೌರುಷ ಮಾಡಿದ್ದೆ ಹೇಳಿ" ಉಗ್ರಕೋಪಿ ದತ್ತುವಿನ ಹೊಡೆಯಲೆತ್ತಿದ ನಡಗುವ ಸಾರಿನ ಸೌಟಿನ ಕೈಯನ್ನು ಅನಂತ ಕಸಿದ. "ನನಗೆ ಬೋಳಿ ಅಂದ್ಯಲಾ ನಿನ್ನ ಬಾಯಲ್ಲಿ ಹುಳ ಬೀಳ್ಲಿ. ಧೈರ್ಯ ಇದ್ರೆ ಹೊಡೆಯೊ, ಸಾಯಿಸ್ಲಿ ಬಿಡು" ಸಲೀಲತ್ತೆ ಆವೇಶದಿಂದ ಸೆಟೆದು ನಿಂತಳು. "ನಾನು ಅಪ್ಪಂಗ ಹುಟ್ಟದಂವ ಹೌದೊ ಅಲ್ಲದೊ ಕಾಣ್ಸ್ತೆ" ದತ್ತು ಗರ್ಜಿಸುತ್ತ ಮಲಗುವ ಖೋಲಿಗೆ ಹೋಗಿ ಕದ ಒಡೆಯುವಂತೆ ಬಡೋಲನೆ ಮುಚ್ಚಿದ. ಸಲೀಲತ್ತೆ, "ದಿನಾ ಹಿಂಗೇಯಾ"